ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301
DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301
ದೂರವಾಣಿ : 08382 221170
Telephone: 08382 221170 (Fax)
Email: itstaffdudckarwar@gmail.com

ನಂ. ಡಿಯುಡಿಸಿ /ವಿವ/ಕರಾವಳಿ ಉತ್ಸವ/2017-18 ದಿನಾಂಕ: 02-11-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಯಾವತ್ತೂ ಸಾರ್ವಜನಿಕ ಪ್ರಚಾರಕ್ಕಾಗಿ ಸರಕು ಮತ್ತು ಸಾಮಗ್ರಿಗಳನ್ನು ಮುದ್ರಿಸಿ ಪೂರೈಸುವ ಮುದ್ರಣಗಾರರಿಗೆ ಮತ್ತು ಡಿಟಿಪಿ / ಫ್ಲೆಕ್ಸ್ ಪ್ರಿಂಟರ್ಸ್ ವ್ಯಕ್ತಿ / ಸಂಸ್ಥೆಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ;

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ರವೀಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯಲ್ಲಿ ಮತ್ತು ಜಿಲ್ಲಾ ರಂಗಮಂದಿರದಲ್ಲಿ ಕರಾವಳಿ ಉತ್ಸವ-2017 ದಿನಾಂಕ: 08, 09, 10 ಡಿಸೆಂಬರ್ 2017 ರಂದು ನಡೆಸಲು ನಿರ್ಧರಿಸಲಾಗಿದೆ. ಸದ್ರಿ ಕಾರ್ಯಕ್ರಮದ ಕುರಿತು ಫ್ಲೆಕ್ಸ್, ಬ್ಯಾನರ್ಸ್, ಪೋಸ್ಟರ್ಸ್, ಐಡಿ ಕಾರ್ಡ, ಆಮಂತ್ರಣ ಪತ್ರಿಕೆ, ಸ್ಮರಣ ಸಂಚಿಕೆ, ಇತ್ಯಾದಿ ಮುದ್ರಣಗಳನ್ನು ಸಾಮಗ್ರಿ ಸಮೇತ ಮುದ್ರಿಸಿಕೊಡಲು ಶರ್ತಿಗೆ ಒಳಪಟ್ಟು ಟೆಂಡರನ್ನು ಕರೆಯಲಾಗಿದೆ. ಟೆಂಡರ ಸಲ್ಲಿಸುವ ಅಂತಿಮ ದಿನಾಂಕ:14-11-2017 ರಂದು ಸಾಯಂಕಾಲ 16.00 ಗಂಟೆ ಒಳಗಡೆ ದರವಾರವನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಇಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ದರವಾರವನ್ನು ಅಧಿಕೃತ ಟೆಂಡರ್ ನಮೂನೆಯಲ್ಲಿ ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಿಂದ ಪಡೆದುಕೊಳ್ಳಬಹುದಾಗಿದೆ. ಅವಧಿ ಮೀರಿ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ಇವರಿಗೆ ದೂರವಾಣಿ ಸಂಖ್ಯೆ 08382-221170 ಅಥವಾ ಮೊಬೈಲ್ ನಂ. 9448120430 ಅಥವಾ ಇ-ಮೇಲ್- itstaffdudckarwar@gmail.com ಮೂಲಕ ಸಂಪರ್ಕಿಸಬಹುದಾಗಿದೆ.

3/11/17

ಅಧ್ಯಕ್ಷರು
ಟೆಂಡರ್ ಸಮಿತಿ ಕರಾವಳಿ ಉತ್ಸವ – 2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ಉತ್ತರ ಕನ್ನಡ, ಕಾರವಾರ

# ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301

ದೂರವಾಣಿ : / Telephone: 08382 221170, 08382 221170 (Fax)

Email: itstaffdudckarwar@gmail.com


ನಂ. ಡಿಯುಡಿಸಿ /ವಿವ/ಕರಾವಳಿ ಉತ್ಸವ/2017-18 ದಿನಾಂಕ: 02-11-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಯಾವತ್ತೂ ಸಾರ್ವಜನಿಕ ಪ್ರಚಾರಕ್ಕಾಗಿ ಸರಕು ಮತ್ತು ಸಾಮಗ್ರಿಗಳನ್ನು ಮುದ್ರಿಸಿ ಪೂರೈಸುವ ಮುದ್ರಣಗಾರರಿಗೆ ಮತ್ತು ಡಿಟಿಪಿ / ಫ್ಲೆಕ್ಸ್ ಪ್ರಿಂಟರ್ಸ್ ವ್ಯಕ್ತಿ / ಸಂಸ್ಥೆಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ;

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ರವೀಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯಲ್ಲಿ ಮತ್ತು ಜಿಲ್ಲಾ ರಂಗಮಂದಿರದಲ್ಲಿ ಕರಾವಳಿ ಉತ್ಸವ-2017 ದಿನಾಂಕ: 08, 09, 10 ಡಿಸೆಂಬರ್ 2017 ರಂದು ನಡೆಸಲು ನಿರ್ಧರಿಸಲಾಗಿದೆ. ಸದ್ರಿ ಕಾರ್ಯಕ್ರಮದ ಕುರಿತು ಫ್ಲೆಕ್ಸ್, ಬ್ಯಾನರ್ಸ್, ಪೋಸ್ಟರ್ಸ್, ಐಡಿ ಕಾರ್ಡ, ಆಮಂತ್ರಣ ಪತ್ರಿಕೆ, ಸ್ಮರಣ ಸಂಚಿಕೆ, ಇತ್ಯಾದಿ ಮುದ್ರಣಗಳನ್ನು ಸಾಮಗ್ರಿ ಸಮೇತ ಮುದ್ರಿಸಿಕೊಡಲು ಈ ಕೆಳಗಿನ ಶರ್ತಿಗೆ ಒಳಪಟ್ಟು ಟೆಂಡರನ್ನು ಕರೆಯಲಾಗಿದೆ. ಟೆಂಡರ ಸಲ್ಲಿಸುವ ಅಂತಿಮ ದಿನಾಂಕ:14-11-2017 ರಂದು 16-00 ಗಂಟೆ ಒಳಗಡೆ ದರವಾರವನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಇಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ದರವಾರವನ್ನು ಅಧಿಕೃತ ಟೆಂಡರ್ ನಮೂನೆಯಲ್ಲಿ ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಿಂದ ಪಡೆದುಕೊಳ್ಳಬಹುದಾಗಿದೆ. ಅವಧಿ ಮೀರಿ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ಇವರಿಗೆ ದೂರವಾಣಿ ಸಂಖ್ಯೆ 08382-221170 ಅಥವಾ ಮೊಬೈಲ್ ನಂ. 9448120430 ಅಥವಾ ಇ-ಮೇಲ್-- itstaffdudckarwar@gmail.com ಮೂಲಕ ಸಂಪರ್ಕಿಸಬಹುದಾಗಿದೆ.

1. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:14-11-2017 ರಂದು 16-00 ಗಂಟೆ
2. ಟೆಂಡರ್ ತೆರೆಯುವ ದಿನಾಂಕ: 15-11-2017 ರಂದು 17-00 ಗಂಟೆ
3. ಮುಂಗಡ ಠೇವಣಿ ರೂ. 10,000/- (ಡಿ.ಡಿ ಮೂಲಕ ಅಧ್ಯಕ್ಷರು, ಕರಾವಳಿ ಉತ್ಸವ ಸಮಿತಿ, ಉ.ಕ. ಕಾರವಾರ )
4. ಮುದ್ರಣ ಮುಕ್ತಾಯಗೊಳಿಸಲು ನಿಗದಿಪಡಿಸಿದ ಅವಧಿ 7 ದಿನಗಳು

**ಶರ್ತುಗಳು :**

1) ಸ್ವೀಕೃತವಾದ ದರವಾರುಗಳನ್ನು ಹಾಜರಿದ್ದ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರಿನಲ್ಲಿ ದಿನಾಂಕ: 15-11-2017 ರಂದು 17-00 ಗಂಟೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರದಲ್ಲಿ ತೆರೆಯಲಾಗುವುದು.

2) ಟೆಂಡರ್ ಮಂಜೂರಾದವರು ಮಂಜೂರಿ ಆದೇಶ ನೀಡಿದ 7 ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣ ಮಾಡಿ ಕೊಡತಕ್ಕದ್ದು.

3) ಟೆಂಡರ್ ಮಂಜೂರಾದವರು ತಿಳಿಸಿದ ತಕ್ಷಣ ರೂ. 100.00 ರ ಛಾಪಾ ಕಾಗದದ ಮೇಲೆ ಕರಾರು ಪತ್ರ ಬರೆದುಕೊಡುವುದು

4) ಟೆಂಡರ್ ಮಂಜೂರಾದವರು ಈ ಮುದ್ರಣಕ್ಕೆ ಹಾಗೂ ಅದಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಅಧ್ಯಕ್ಷರು, ಪ್ರಚಾರ ಸಮಿತಿಯವರು ತಿಳಿಸಿದ ನಮೂನೆಯಲ್ಲಿ ನಿರ್ವಹಿಸತಕ್ಕದ್ದು.

5) ಟೆಂಡರ್ ಮಂಜೂರಾದವರು ಅಂದಾಜು ಮಾಡಲ್ಪಟ್ಟ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಾಮಗ್ರಿಗಳನ್ನು ಪೂರೈಸಲು ಬದ್ಧರಿರತಕ್ಕದ್ದು.

6) ಟೆಂಡರ್ ಮಂಜೂರಾದವರು ಅಧ್ಯಕ್ಷರು, ಪ್ರಚಾರ ಸಮಿತಿಯವರು ತಿಳಿಸಿದ ಸಲಹೆ ಸೂಚನೆಗಳನ್ನು ಪಾಲಿಸದೇ ಇದ್ದಲ್ಲಿ ಮತ್ತು ಮುದ್ರಣ ಹಾಗೂ ಮುದ್ರಣ ಸಾಮಗ್ರಿಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು ಮತ್ತು ಈ ಸಂಬಂಧ ಗುತ್ತಿಗೆದಾರರಿಗೆ ಆಗುವ ನುಕ್ಸಾನಿಗೆ ಈ ಕಚೇರಿಯು ಜವಾಬ್ದಾರರಾಗುವುದಿಲ್ಲ.

7) ಟೆಂಡರ ಸಲ್ಲಿಸುವವರು ಎಲ್ಲಾ ತೆರಿಗೆಗಳನ್ನು ಸೇರಿಸಿ ದರವಾರವನ್ನು ನೀಡತಕ್ಕದ್ದು.

8) ಈ ಟೆಂಡರ್ ಸಂಬಂಧ ಅಧ್ಯಕ್ಷರು, ಪ್ರಚಾರ ಸಮಿತಿ/ಜಿಲ್ಲಾಧಿಕಾರಿಗಳು, ಉ.ಕ. ಇವರು ಕೈಗೊಳ್ಳುವ ನಿರ್ಣಯ ಅಂತಿಮವಾಗಿರುತ್ತದೆ. ಅದನ್ನು ಪ್ರಶ್ನಿಸುವ ಅಧಿಕಾರಿ ಯಾರಿಗೂ ಇರುವುದಿಲ್ಲ.

9) ಟೆಂಡರ್‌ದಾರರು ಸಲ್ಲಿಸುವ ದರವಾರವು ಎಲ್ಲಾ ತೆರಿಗೆ ಮತ್ತು ಕರ ಸೇರಿಸಿ ನೀಡತಕ್ಕದ್ದು.

3/11/17

ಅಧ್ಯಕ್ಷರು
ಟೆಂಡರ್ ಸಮಿತಿ ಕರಾವಳಿ ಉತ್ಸವ – 2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ಉತ್ತರ ಕನ್ನಡ, ಕಾರವಾರ